ಬೆಚ್ಚಿ ಬೀಳಿಸಿತು. ಇಲಿ ಇರಬೇಕು. ಏನನ್ನೋ ಬೀಳಿಸಿ ಭಾವಣೆಯನ್ನು ಹತ್ತಿತು. ಮತ್ತೆ ಮೌನ. ಸ್ವಲ್ಪ ಹೊತ್ತಿನ ಬಳಿಕ ಮಿಸ್ಟರ್ ವೈಟ್ ಎದ್ದು ಕುಳಿತು ಬೆಂಕಿಕಡ್ಡಿಯನ್ನು ಗೀರಿದ. ಮತ್ತೊಂದು ಮೋಂಬತ್ತಿಯನ್ನು ತರಲೆಂದು, ಡವಗುಟ್ಟುವ ಎದೆಯನ್ನು ಲೆಕ್ಕಿಸದೆ ಅವನು ಸಾವಕಾಶವಾಗಿ ಮೆಟ್ಟಿಲುಗಳನ್ನು ಇಳಿದು ಹಜಾರಕ್ಕೆ ಹೋದ. ಅವನು ಮೆಟ್ಟಿಲುಗಳ ಬುಡಕ್ಕೆ ತಲುಪಿದಾಗ ಬೆಂಕಿಕಡ್ಡಿ ಆರಿಹೋಯಿತು. ಮತ್ತೊಂದನ್ನು ಗೀರಲೆಂದು ಅವನು ಕೈಯನ್ನು ಎತ್ತಿದ ಅಷ್ಟೇ... ಹೊರಗೆ, ಮುಂಬಾಗಿಲು ಎರಡು ಬಾರಿ ತಟ್ಟಿದ ಸದ್ದಾಯಿತು. ಮೃದುವಾದ, ಅವರಿಗೆ ಬಹಳ ಪರಿಚಿತವಾದ ಬಾಗಿಲು ಠಕಾಯಿಸುವ ಶಬ್ದ!

ಮಿಸ್ಟರ್ ವೈಟನ ಕೈಯಿಂದ ಬೆಂಕಿಪೊಟ್ಟಣ ತಂತಾನೆ ಜಾರಿ ಕೆಳಗೆ ಬಿದ್ದು ಅವನು ನಿಂತಲ್ಲೆ ಕಲ್ಲಾಗಿಬಿಟ್ಟ. ಕೆಲವು ಕ್ಷಣಗಳ ಮಟ್ಟಿಗೆ, ಬಾಗಿಲು ಮತ್ತೊಮ್ಮೆ ಠಕಾಯಿಸುವವರೆಗೆ, ಅವನ ಉಸಿರೂ ನಿಂತುಹೋಯಿತು. ಅವನು ತಕ್ಷಣ ಹಿಂದಕ್ಕೆ ತಿರುಗಿದ. ಎರಡೆರಡು ಮೆಟ್ಟಿಲುಗಳನ್ನು ಒಮ್ಮೆಲೇ ಹತ್ತಿ ಬೆಡ್‌ರೂಮಿನ ಕದವನ್ನು ದಢಾರನೇ ಮುಚ್ಚಿ ಅಗುಳಿ ಹಾಕಿದ.

'ಏ... ಏ... ಏನಾಯ್ತು?' ಮಿಸೆಸ್ ವೈಟ್ ದಿಗ್ಗನೆ ಎದ್ದು ಕುಳಿತಳು.

'ಇಲಿ... ಇಲಿ!!' ಕಂಪಿಸುವ ದನಿಯಲ್ಲಿ ಅವನು ಹೇಳಿದ. ಅವನು ಜೋರಾಗಿ ಏದುಸಿರು ಬಿಡುತ್ತಿದ್ದ. 'ನನ್ನ ಮೇಲೆಯೇ ನೆಗೆಯಿತು!'

ಮಿಸೆಸ್ ವೈಟ್ ಈಗ ಸಂಪೂರ್ಣವಾಗಿ ಎಚ್ಚರಗೊಂಡಿದ್ದಳು. ಅಷ್ಟರಲ್ಲಿ ಮುಂಬಾಗಿಲನ್ನು ಜೋರಾಗಿ ಬಡಿಯುವ ಶಬ್ದ ಮನೆಯೊಳಗೆಲ್ಲಾ ಪ್ರತಿಧ್ವನಿಸತೊಡಗಿತು.

'ಅದು ಹರ್ಬರ್ಟ್... ಖಂಡಿತ, ಅವನೇ ಅದು!...' ಅರಚುತ್ತಾ ಅವಳು ಮೆಟ್ಟಿಲ ಕಡೆಗೆ ದೌಡಾಯಿಸಿದಳು. ಮಿಸ್ಟರ್ ವೈಟ್ ಚುರುಕಾಗಿ ಅವಳನ್ನು ಗಟ್ಟಿಯಾಗಿ ಹಿಡಿದು ನಿಲ್ಲಿಸಿದ.

'ನೀನು ಏನು ಮಾಡಲು ಹೊರಟಿದ್ದೀಯ ಮಾರಾಯ್ತಿ?' ಅವನು ಆತಂಕದಿಂದ ಕೇಳಿದ.

'ಅವನು... ಅವನು... ನನ್ನ ಕಂದ ಹರ್ಬರ್ಟ್! ಬಿಡಿ ನನ್ನ. ಮೊದಲು ಬಾಗಿಲು ತೆರೆಯುತ್ತೇನೆ. ಪಾಪ ಒಳಗೆ ಬರಲಿ.' ಬಿಡಿಸಿಕೊಳ್ಳಲು ಒದ್ದಾಡುತ್ತಾ ಅವಳು ಹೇಳಿದಳು. 'ಅವನು ಎರಡು ಮೈಲು ನಡೆದುಕೊಂಡು ಬಂದಿದ್ದಾನೆಂಬುದನ್ನೇ ಮರೆತಿದ್ದೆ. ಅದಕ್ಕೆ ಅವನಿಗೆ ಇಷ್ಟೊತ್ತು ಹಿಡಿದಿದೆ ಪಾಪ. ಬಿಡಿ ನನ್ನ. ಹೊರಗೆ ಕತ್ತಲು ತುಂಬಿಕೊಂಡಿದೆ. ಪಾಪ, ಎಷ್ಟೊಂದು ಆಯಾಸವಾಗಿದೆಯೋ! ಎಷ್ಟು ಹಸಿದಿದ್ದಾನೋ! ಊಟಮಾಡದೆ ಎರಡು ವಾರ ಆಯ್ತು!'

'ಹುಚ್ಚು ಹೆಂಗ್ಸೇ... ಬಾಗಿಲು ತೆರೆಯಬೇಡ! ಅವನನ್ನು ಒಳಗೆ ಕರೆದುಕೊಳ್ಳಬೇಡ.' ಅವನು ಜೋರಾಗಿ ಹೇಳಿದ.

'ಮಿಸ್ಟರ್ ವೈಟ್!!' ಅವಳು ಚೀರಿದಳು. 'ನಿಮಗೇನಾಗಿದೆ? ಸ್ವತಃ ನಿಮ್ಮ ಮಗನನ್ನೇ ಒಳಗೆ ಕರೆದುಕೊಳ್ಳಲು ಹೆದರಿಕೊಂಡಿದ್ದೀರಾ? ಹರ್ಬರ್ಟ್... ಕಂದಾ! ಬಂದೆ ಕಣಪ್ಪ, ಬಂದೆ.'

ಕೆಳಗೆ ಮತ್ತೆ ಜೋರಾಗಿ ಬಾಗಿಲು ಬಡಿದ ಶಬ್ದ ಕೇಳಿಸತೊಡಗಿತು. ಮಿಸೆಸ್ ವೈಟ್ ಅದು ಹೇಗೋ ಗಂಡನ ಕೈಯಿಂದ ಬಿಡಿಸಿಕೊಂಡು ಬಾಗಿಲನ್ನು ತೆರೆದು ಮೆಟ್ಟಿಲು ಇಳಿಯತೊಡಗಿದಳು. ಏದುಸಿರು ಬಿಡುತ್ತಾ ಮಿಸ್ಟರ್ ವೈಟ್ ಅವಳನ್ನು ಹಿಂಬಾಲಿಸಿದ.

ಮಿಸೆಸ್ ವೈಟ್ ಮುಂಬಾಗಿಲ ಮಧ್ಯದ ಅಗಳಿಯನ್ನು ಸುಲಭವಾಗಿಯೇ ತೆರೆದಳು. ಆದರೆ ಮೇಲಿನ ಅಗಳಿ ಎಷ್ಟು ಎಳೆದರೂ ಕೆಳಗೆ ಜಗ್ಗಲಿಲ್ಲ. ಅವಳು ಹತಾಶೆಯಿಂದ ಚೀರಿದಳು:

'ಇದು ನನ್ನ ಕೈಯಿಂದ ಆಗುತ್ತಿಲ್ಲ! ಬೇಗ ಬನ್ನಿ ಇತ್ತ.'

ಮಿಸ್ಟರ್ ವೈಟ್ ಅವಳನ್ನು ಕೇಳಿಸಿಕೊಳ್ಳುವ ಸ್ಥಿತಿಯಲ್ಲಿರಲಿಲ್ಲ. ನೆಲದ ಮೇಲೆ ಬಿದ್ದಿದ್ದ